ಮೇ: ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ

ಸಿ.ಸಿ ನಂ 576 /2016

CW.1

**ದಿನಾಂಕಃ 16.02.2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ.ಆರ್.ಡಿ. ಆರೋಪಿ ಪರ ವಕೀಲರಿಂದಃ**

ಈ ಪ್ರಕರಣದ ಆರೋಪಿ ನನಗೆ ಅಣ್ಣನಾಗಬೇಕು. ನನ್ನ ಮತ್ತು ಅರೋಪಿತನ ಜಮೀನು ಒಂದಕೊಂದು ಹೊಂದಿಕೊಂಡಿವೆ ಎಂದರೆ ಸರಿ. 1997 ರಲ್ಲಿ ನನ್ನ ಮತ್ತು ಅರೋಪಿನ ಮಧ್ಯೆ ಪಾಲು ವಾಟ್ನಿಯಾಯಿತು. ಈ ಬಗ್ಗೆ ನ್ಯಾಯಾಲಯಕ್ಕೆ ನಾನು ವಾಟ್ನಿ ಪತ್ರ ಹಾಜರುಪಡಿಸಿದ್ದೇನೆ. ಈ ವಿಷಯ ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಇದು ನನ್ನ ಖಾಸಗಿ ಪಿರ್ಯಾದಿ. ಈ ಪಿರ್ಯಾದಿ ಸಲ್ಲಿಸುವುದಕ್ಕಿಂತ ಮೊಂಲು ಪೋ.ಠಾ.ಯಲ್ಲ ನಾನು ಪಿರ್ಯಾದಿ ನೀಡಿದ್ದೆ. ಹಾಗೂ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯ ದಾಖಲಿಸಿದ್ದೆ. ಆ ಕುರಿತು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಈ ವಿಷಯ ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

ನನ್ನ ಪಿರ್ಯಾದಿಯ ಪುಟ ನಂ. 3 ಖಂಡಿಕೆ 4 ರಲ್ಲಿನ ವಿಷಯ ಸುಳ್ಳು ಎಂದರೆ ಸರಿ ಅಲ್ಲ. ಪಿರ್ಯಾದಿಯಲ್ಲಿ ನನ್ನ ಅಣ್ಣ ಆರೋಪಿ ಇವನು ನೀರು ಬಿಡುವ ವಿಷಯಕ್ಕೆ ನನಗೆ ಅವಾಚ್ಯವಾಗಿ ಬೈದು ಕೈಯಿಂದ ಹೊಡೆದ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿ ನನಗೆ ಜೀವ ಬೆದರಿಕೆ ಹಾಕಿದ್ದ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿ ಅಲ್ಲ. ಆ ಕಾಲಕ್ಕೆ ರವಿ ಗೊನ್ಯಾಗೋಳ ಮತ್ತು ಪಾಂಡು ಗೊನ್ಯಾಗೋಳ ಇವರು ಜಗಳ ಬಿಡಿಸಿದರು ಎಂದು ಸುಳ್ಳು ಹೇಳಿ ಬರೆಸಿದ್ದೆ ಎಂದರೆ ಸರಿ ಅಲ್ಲ. ಗುನ್ನೆ ನಡೆದ ಜಮೀನಿನ ಸರ್ವೆ ನಂ. ನನಗೆ ಗೊತ್ತು ಅದು 84/1 ಎ ಅದನ್ನು ನಾನು ಪಿರ್ಯಾದಿಯಲ್ಲಿ ಹೇಳಿ ಬರೆಸಿದ್ದೇನೆ. ಈ ವಿಷಯ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಗುನ್ಹಾ ಸ್ಥಳದ ಚಕಬಂದಿ ನನಗೆ ಗೊತ್ತು. ಪೂರ್ವಕ್ಕೆ ಅಡಿವೆಪ್ಪ ಸುತಾರ ಇವರ ಜಮೀನು, ಪಶ್ಚಿಮಕ್ಕೆ ಒಡೆಯರ ಮತ್ತು ಮರಾಠಿಯವರ ಜಮೀನು ಇದೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ನನ್ನ ಜಮೀನು ಇರುತ್ತದೆ.

ನನ್ನ ಪಿರ್ಯಾದಿಯಲ್ಲಿ ಘಟನಾ ಸ್ಥಳದ ಚಕಬಂದಿ ಬರೆಸಿರುತ್ತೇನೆ.

(ಈ ಸಂದರ್ಭದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೊಂದು ಕೌಂಟರ ಪ್ರಕರಣ ಇದ್ದು, 2 ಪ್ರಕರಣಗಳನ್ನು ಒಟ್ಟಿಗೆ ಸಾಕ್ಷ್ಯ ಮಾಡಿಸುವಂತೆ ಕೋರಿಕೊಂಡಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಜೆಎಂಎಫ್‌ಸಿ ಮುಧೋಳ. ಸಾಕ್ಷಿಯ

ಸಹಿ